

ಟಿ.ವಿ. ವೆಂಕಟಾಚಲ ಶಾಸ್ತ್ರೀ

# ಮೇಷ್ಟ್ರು ಕುವೆಂಪು

ಕುವೆಂಪು ನಮಗೆ 'ಪಂಪಭಾರತ' ಮತ್ತು 'ಸಾಹಿತ್ಯ ವಿಮರ್ಶೆಯ ತತ್ತ್ವಗಳು' ಎಂಬ ಪಾಠಗಳನ್ನು ಬಿ.ಎ. ಆನರ್ಸ್ ತರಗತಿಗಳಲ್ಲಿ, 'ಕಾವ್ಯಮೀಮಾಂಸೆ' ಎಂಬ ಪಾಠವನ್ನು ಎಂ.ಎ. ತರಗತಿಯಲ್ಲಿ ತೆಗೆದುಕೊಂಡರು. ಆಗ 'ಪಂಪಭಾರತ' ಪಠ್ಯ ಸಿಕ್ಕುತ್ತಿರಲಿಲ್ಲ. ಎಲ್ಲಿಯಾದರೂ ಪುಸ್ತಕ ದೊರಕಿಸಿಕೊಂಡು, ದಿನದ ಪಾಠಕ್ಕೆ ಬೇಕಾಗುವ 10-20 ಪದ್ಯಗಳನ್ನು ನೋಟ್ ಪುಸ್ತಕದಲ್ಲಿ ಬರೆದುಕೊಂಡು ಹೋಗುತ್ತಿದ್ದೆವು. ಆದರೆ ಸ್ವಲ್ಪ ಸಮಯ ಕಳೆದ ಮೇಲೆ ಸಾಹಿತ್ಯ ಪರಿಷತ್ತಿನಿಂದ 1935ರ ಮುದ್ರಣದ 'ಪಂಪಭಾರತ'ದ ಮೊದಲನೆಯ ಭಾಗವನ್ನು ನಮ್ಮಲ್ಲಿ ಕೆಲವರು ಪಡೆದುಕೊಳ್ಳುವುದು ಸಾಧ್ಯವಾಯಿತು.

ಕುವೆಂಪು ಕಾವ್ಯಪಾಠ ಮಾಡುತ್ತಿದ್ದ ರೀತಿ ವಿಶಿಷ್ಟವಾದ್ದು. ಅನ್ವಯಕ್ರಮದಲ್ಲಿ ಪ್ರತಿ ಪದದ ಅರ್ಥ ಹೇಳಿ, ತಾತ್ಪರ್ಯದೊಂದಿಗೆ ಅದನ್ನು ಮುಗಿಸುವ ಕ್ರಮವಲ್ಲ, ಅದು. ಓದುವ ಧಾಟಿಯಿಂದಲೇ ಪದ್ಯದ ಅರ್ಥ ಆಶಯಗಳು, ಧ್ವನಿ ಸ್ವಾರಸ್ಯಗಳು ನಮಗೆ ಹೃದ್ಗತವಾಗುವಂತೆ ಮಾಡುತ್ತಿದ್ದರು ಅವರು. ಅವರ ಗುರುಗಳಾದ ಬಿ.ಎಂ.ಶ್ರೀ. ಅವರೂ ಹೀಗೆಯೇ ಮಾಡುತ್ತಿದ್ದರೆಂದು ಶ್ರೀಯವರ ಇನ್ನೊಬ್ಬ ಶಿಷ್ಯರೂ ಕುವೆಂಪು ಅವರ ಸಹಪಾಠಿಗಳೂ ಆದ ಡಿ.ಕೆ. ಭೀಮಸೇನರಾಯರು ಒಮ್ಮೆ ನನ್ನೊಂದಿಗೆ ಹೇಳಿದರು.

ಈಗಲೂ ನನ್ನ ನೆನಪಿನಲ್ಲಿ ನಿಚ್ಚಳವಾಗಿದೆ: 'ಪಂಪಭಾರತ'ದ ಪೀಠಿಕಾಭಾಗದಲ್ಲಿ ಅರಿಕೇಸರಿಯ ಪೂರ್ವಜನಾದ ಬದ್ದೆಗನ ದಾನಾತಿಶಯವನ್ನು ವರ್ಣಿಸುವ 'ಸುರಭಿ ದೇವತೆಯೆಂಬ ಕಾಪಿನೆ ಮಾಣದು...' ಎಂದು ಮೊದಲಾಗುವ ಒಂದು ವಿರಳವೃತ್ತವಿದೆ (1-29), ಇದನ್ನು ತಕ್ಕ ಗಮಕದಲ್ಲಿ ಕುವೆಂಪು ಅವರು

